S C.R.P.67

Form No.4
(Criminal)
Deposition
Sheets
(R.P.No.57)

# 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್: 89/2021

ಚಾ.ಸಾ.-15 ಪ್ರಾ.ಸಾ.-05

| | |
|---|---|
| ಸಾಕ್ಷಿದಾರರ ಹೆಸರು | ಯೋಗಾನಂದ ಪಟೇಲ್ |
| ತಂದೆಯ ಹೆಸರು | ಮರಿಗೌಡ |
| ವಯಸ್ಸು | 57 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ಹುಲ್ಲಕೆರೆ ಗ್ರಾಮ,<br>ಕೊತ್ತತ್ತಿ , ಮಂಡ್ಯ |

**ದಿನಾಂಕ: 03.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾಗರಾಜು ಬಿನ್ ಕಾಳಯ್ಯ ಪರಿಚಯವಿದ್ದು ಈಗ ಅವರು ತೀರಿಕೊಂಡಿರುತ್ತಾರೆ. ಅವರು ಬುಡಬುಡಕೆ ಅಂದರೆ ಶಿಳ್ಳೆಕ್ಯಾತ ಜನಾಂಗಕ್ಕೆ ಸೇರಿದವರು.

2) ಈಗ ನನಗೆ ತೋರಿಸುತ್ತಿರುವ ಶವ ತನಿಖ ಮಹಜರನಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ16 ಎಂದು , ಸಾಕ್ಷಿಗಳ ಸಹಿಯನ್ನು ನಿಪಿ 16 ಎ ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಬರೆಯಲಾಗಿರುತ್ತದೆ. ಅದನ್ನು ಸುಮಾರು 5-6 ವರ್ಷಗಳ ಹಿಂದೆ ಬರೆಯಲಾಗಿರುತ್ತದೆ. ಸದರಿ ದಾಖಲೆಯನ್ನು ಪೊಲೀಸರು ಬರೆದಿರುತ್ತಾರೆ. ಆ ಸಮಯದಲ್ಲಿ ಭಾವಚಿತ್ರಗಳನ್ನು ಕೂಡ ತೆಗೆಯಲಾಗಿರುತ್ತದೆ. ಅವುಗಳಲ್ಲಿ ನಾನು ಕಂಡುಬಂದಿರುತ್ತೇನೆ. 3 ಭಾವಚಿತ್ರಗಳನ್ನು ಕ್ರಮವಾಗಿ ನಿಪಿ 17 ರಿಂದ 19 ಎಂದು ಗುರುತಿಸಲಾಗಿರುತ್ತದೆ. ಮೃತದೇಹಕ್ಕೆ ತಲೆಗೆ ಗಾಯವಾಗಿತ್ತು. ಕೈಕಾಲುಗಳಿಗೆ

ಗಾಯಗಳಾಗಿದ್ದುವು. ಬ್ಯಾಂಡೇಜು ಹಾಕಿದ್ದರು. ನಮ್ಮ ಊರಿನ ಮಹದೇವು ಮತ್ತು ನಾಗರಾಜು ಎಂಬುವರು ಇದ್ದರು. ಅವರು ಕೂಡ ದಾಖಲೆಗೆ ಸಹಿ ಮಾಡಿದ್ದಾರೆ. ಪೊಲಿಸರು ಶವ ತನಿಖ ಮಹಜರನ್ನು ಹೊರತುಪಡಿಸಿ ಬೇರೆ ಯಾವುದೆ ವಿಚಾರಣೆ ಮಾಡಿರುವುದಿಲ್ಲ. ಘಟನೆ ಏನಾಯಿತು ಎಂದು ಹಾಗೂ ಆನಂತರ ಘಟನೆಗಳು ಏನಾಯಿತು ಎಂದು ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ ನಾನು ಯಾವುದೆ ಹೇಳಿಕೆ ಅವರಿಗೆಕೊಟ್ಟಿರುವುದಿಲ್ಲ. ಆರೋಪಿತರ ಪರಿಚಯ ಇದೆ. ಅವರು ಕುಂಬಾರ ಮತ್ತು ಒಕ್ಕಲಿಗ ಜಾತಿಗೆ ಸೇರಿದವರಾಗಿದ್ದಾರೆ. ಆರೋಪಿತರ ಮತ್ತು ಮೃತನಾಗರಾಜು ಅವರ ಕುಟುಂಬದ ನಡುವೆ ಯಾವುದೆ ಪಂಚಾಯಿತಿಯನ್ನು ನಾನು ಮಾಡಿರುವುದಿಲ್ಲ. ಯಾವುದೆ ಮೊತ್ತವನ್ನು ಮೃತನ ಮನೆಯವರಿಗೆ ಕೊಡಬೇಕೆಂದು ನಾವು ಯಾವುದೆ ತೀರ್ಮಾನ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

3) ದಿಃ15.3.2021 ರಂದು ಮೃತರ ಸಂಬಂಧಿಗಳಾದ ಚಾಸ 1 , 7 , 10 ನಮ್ಮ ಮನೆ ಬಳಿ ಬಂದಿದ್ದರು ಎಂದರೆ ಸರಿಯಲ್ಲ. ದಿಃ 10.3.2021ರಂದು ನ್ಯಾಯಾಲಯದ ಮುಂದಿರುವ ಆರೋಪಿ 1 ಹಾಗೂ ಪ್ರಕಾಶ , ಅರುಣ ಎಂಬುವರ ತೆಂಗಿನ ಮರ ಕುಯ್ಯಲು ಕರೆದುಕೊಂಡು ಹೋಗಿದ್ದರು ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮೃತರಿಂದ ಕೆಲಸ ಮಾಡಿಸಿಕೊಳ್ಳುವಾಗ ಅವರಿಗೆ ಕೊಡಬೇಕಾದ /ನೀಡಬೇಕಾದ ಯಾವುದೆ ಸುರಕ್ಷತ ಕ್ರಮಗಳನ್ನು ನೀಡದ ಕಾರಣ ತೆಂಗಿನ ಮರದ 60 ಅಡಿ ಎತ್ತರದಿಂದ ಬಿದ್ದು ಕೈಕಾಲು , ತಲೆಗೆ ಗಾಯಗಳಾಗಿದ್ದವು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಗಾಯಾಳುವನ್ನು ಪ್ರಕಾಶ , ಅರುಣಕುಮಾರ , ಶಿವಕುಮಾರ ಅವರು ಆಸ್ಪತ್ರೆಗೆ ಸೇರಿಸಿದ್ದರು ಹಾಗೂ ಆಸ್ಪತ್ರೆಯಲ್ಲಿ ಆರೋಪಿ ಶಿವಕುಮಾರ ಮೋಟಾರು ಸೈಕಲಿಂದ ಬಿದ್ದು ಪೆಟ್ಟಾಯಿತು ಎಂದು

ಬರೆಸಿದ್ದರು ಎಂದು ಚಾಸಾ 1 , 7 , 10 ನನ್ನ ಬಳಿ ಹೇಳಿದ್ದರು ಎಂದರೆ ಸರಿಯಲ್ಲ. ಗಾಯಾಳುವನ್ನು ಬೆಂಗಳೂರು ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಲಾಗಿದೆ ಎಂದು ಅವರು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಅಲ್ಲದೆ ಈ ಬಗ್ಗೆ ಆರೋಪಿತರಿಂದ ಗಾಯಾಳುವಿನ ಚಿಕಿತ್ಸೆಗೆ ಹಣವನ್ನು ಕೊಡಿಸಲು ಈ ಬಗ್ಗೆ ಪಂಚಾಯಿತಿ ಮಾಡಬೇಕೆಂದು ಅವರು ನನ್ನ ಬಳಿ ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಆರೋಪಿ ಶಿವಕುಮಾಅರ , ಆರೋಪಿತರನ್ನು ನಾವು ನಮ್ಮ ಮನೆ ಬಳಿ ಕರೆಸಿದ್ದೆ ಎಂದರೆ ಸರಿಯಲ್ಲ. ನಾನು ಮತ್ತು ಇತರ ಪಂಚಾಯಿತಿದಾರರು ಗಾಯಾಳು ಕುಟುಂಬಕ್ಕೆ ಚಿಕಿತ್ಸೆಗೆ ಶಿವಕುಮಾರ , ಪ್ರಕಾಶ , ಅರುಣಕುಮಾರ ತಲಾ 1,50,000/- ಹಣವನ್ನು ಆಸ್ಪತ್ರೆ ಖರ್ಚಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೆವು ಎಂದರೆ ಸರಿಯಲ್ಲ. ಈ ಬಗ್ಗೆ ಇಬ್ಬರು ಆರೋಪಿತರು ಪ್ರಕಾಶ ಮತ್ತು ಅರುಣಕುಮಾರ್ ತಲಾ 1,50,000 ವನ್ನು ಚಾಸ 1 ,7 ರವರಿಗೆ ಆಸ್ಪತ್ರೆ ಖರ್ಚು ಕೊಟ್ಟರು ಎಂದರೆ ಸರಿಯಲ್ಲ. ಆದರೆ ಆರೋಪಿ 1 ಶಿವಕುಮಾರ ಯಾವುದೆ ಪರಿಹಾರ ಕೊಡುವುದಿಲ್ಲ ಎಂದು ಹೇಳಿ ಹೊರಟು ಹೋದರು ಎಂದರೆ ಸರಿಯಲ್ಲ. ದಿಃ 16.3.2021 ರಂದು ಚಾಸಾ 1 , 7 , 10 ರವರು ಆರೋಪಿ ಶಿವಕುಮಾರ ಅವರ ಮನೆ ಬಳಿ ಹೋಗಿ ಉಳಿದ 1,50,000 ನೀನು ಕೊಡು ಇಲ್ಲವಾದರೆ ಉಳಿದ ಇಬ್ಬರು ಆರೋಪಿತರು ಕೊಟ್ಟಿರುವ ಹಣ ವಾಪಾಸು ಪಡದುಕೊಂಡು ಸಂಪೂರ್ಣ ಚಿಕಿತ್ಸೆ ವೆಚ್ಚ ಭರಿಸಲು ಕೇಳಿಕೊಂಡರು ಎಂದು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿ 1 ಮತ್ತು ಮನೆಯವರು ಚಾಸ 1 , 7 , 10 ರವರಿಗೆ ಜಾತಿನಿಂದನೆ ಮಾಡಿ ಹಲ್ಲೆ ಮಾಡಿ ಪ್ರಾಣ ಬೆದರಿಕೆಹಾಕಿದರು ಎಂದು ಚಾಸಾ 1, 7 , 10 ನನಗೆ ಹೇಳಿದ್ದರು ಎಂದರೆ ಸರಿಯಲ್ಲ.

4) ದಿಃ 19.3.2021 ರಂದು ಗಾಯಾಳು ನಾಗರಾಜು ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಆರೋಪಿತರ ನಿರ್ಲಕ್ಷತನದ ಕಾರಣ ಅವರು ತೀರಿಕೊಂಡರು ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

5) ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **"ದಿಃ22.3.2021** ರಂದು ಈ ಮೇಲ್ಕಂಡ ವಿಳಾಸದಲ್ಲಿ............... ............. ... ............... ............... ............... ............... ಮತ್ತೆ

ನೋಡಿದರೆ ಗುರುತಿಸುತ್ತೇನೆ" ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.20** ಎಂದು ಗುರುತಿಸಲಾಯಿತು. ಆರೋಪಿತರ ಜೊತೆಗೆ ಅನ್ಯೋನ್ಯವಾಗಿ ಇದ್ದೇನೆ ಎಂದರೆ ಸರಿಯಲ್ಲ. ನಿಪಿ 20 ರಂತೆ ನಾನು ಹೇಳಿಕೆ ಕೊಟ್ಟಿದರು ಅದರಲ್ಲಿರುವ ಅಂಶ ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಎಲ್ಲಾ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

6) ನಿಪಿ 16 ರಲ್ಲಿ ಏನೆಲ್ಲ ಬರೆದುಕೊಳ್ಳಲಾಗಿದೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾಗರಾಜು ಅವರು ಅಪಘಾತದಿಂದ ತೀರಿಕೊಂಡರು ಎಂದು ನನಗೆ ಗೊತ್ತಾಗಿರುತ್ತದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ